ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 17 ರಿಂದ 23 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ:

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳು ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಹಾಗೂ ಮಧ್ಯಮ ಪ್ರಮಾಣದ ಕೈಗಾರಿಕೆ ಸಚಿವರು) : ಮಾನ್ಯ ಅಧ್ಯಕ್ಷರೆ, "2002ರ ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) ವಿಧೇಯಕವನ್ನು ಭಾರತದ ರಾಷ್ಟ್ರಪತಿಯವರಿಂದ ಹಿಂದಿರುಗಿಸಿದ್ದ ಮೇರೆಗೆ ಈ ಸಭೆಯು ತಿದ್ದುಪಡಿಗಳೊಂದಿಗೆ ಪುನರ್ ಅಂಗೀಕರಿಸಬೇಕೆಂದು ಕೋರುತ್ತೇನೆ".

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

"2002ರ ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) ವಿಧೇಯಕವನ್ನು ಭಾರತದ ರಾಷ್ಟ್ರಪತಿಯವರಿಂದ ಹಿಂದಿರುಗಿಸಿದ್ದ ಮೇರೆಗೆ ಈ ಸಭೆಯು ತಿದ್ದುಪಡಿಗಳೊಂದಿಗೆ ಪುನರ್ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

(ii)ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ, 2003

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೆ, "2003ರ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ".

ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು : ಇದರ ಬಗ್ಗೆ ತಾವು ವಿವರಿಸಿ ಹೇಳಿ. ವಿಧೇಯಕದ ಉದ್ದೇಶವೇನು ಎಂದು ಹೇಳಿ.

ಶ್ರೀ ಎಂ.ವೈ. ಘೋರ್ಪಡೆ : ಮಾನ್ಯ ಅಧ್ಯಕ್ಷರೇ, ಕಳೆದ ವರ್ಷ ಸೆಪ್ಟೆಂಬರ್ ತಿಂಗಳಿನಲ್ಲಿ ಆಗಬೇಕಾಗಿದ್ದಂಥ ಪಂಚಾಯಿತಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಚುನಾವಣೆಯನ್ನು ಮೂರು ತಿಂಗಳು ಮುಂದಕ್ಕೆ ಹಾಕುವಂಥ ಒಂದು ಆರ್ಡಿನೆನ್ಸ್ ತಂದದ್ದು ತಮಗೆಲ್ಲಾ ಗೊತ್ತಿದೆ. ಚುನಾವಣೆಯನ್ನು ಮೂರು ತಿಂಗಳು ಮುಂದಕ್ಕೆ ಹಾಕಲು ಕಾರಣವೇನೆಂದರೆ, ಆಗ ರಾಜ್ಯದಲ್ಲಿ ಬರಗಾಲವಿದ್ದುದ್ದರಿಂದ ಚುನಾವಣೆಯನ್ನು ಮುಂದಕ್ಕೆ ಹಾಕುವ ವಿಚಾರ ಕ್ಯಾಬಿನೆಟ್‌ನಲ್ಲಿ ಬಂದು, ದಿನಾಂಕ 6-9-02 ರಂದು ಒಂದು ಆರ್ಡಿನೆನ್ಸ್ ಹೊರಡಿಸಿ ಅದನ್ನು ಮುಂದಕ್ಕೆ ಹಾಕಿದ್ದೆವು. ಆಗ ಮುಂದಕ್ಕೆ ಹಾಕಿದ ಚುನಾವಣೆಗಳು ಡಿಸೆಂಬರ್ 2002 ಮತ್ತು ಜನವರಿ 2003ರಲ್ಲಿ ಪೂರ್ತಿ ಆಗಿವೆ. ಆಗ ಮಾಡಿದಂಥ ಆರ್ಡಿನೆನ್ಸನ್ನು ರೀಪ್ಲೇಸ್ ಮಾಡುವುದಕ್ಕೋಸ್ಕರವಾಗಿ ಈ ವಿಧೇಯಕವನ್ನು

ತಮ್ಮ ಮುಂದೆ ತರಲಾಗಿದೆ. ಚುನಾವಣೆ ಈಗಾಗಲೇ ಆಗಿಹೋಗಿದೆ. ರೂಲ್ಸ್ ಪ್ರಕಾರ, ಆರ್ಡಿನೆನ್ಸ್ ಮಾಡಿದ್ದನ್ನು ರೀಪ್ಲೇಸ್ ಮಾಡಬೇಕು ಎಂದು ಇದೆ, ಅದಕ್ಕಾಗಿ ಇದನ್ನು ತಂದಿದ್ದೇವೆ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೇ, ಒಂದು ಕ್ಲಾರಿಫಿಕೇಷನ್ ಚುನಾವಣೆಯನ್ನು ಕಳೆದ ಸೆಪ್ಟೆಂಬರ್ ತಿಂಗಳಿಂದ ಮೂರು ತಿಂಗಳು ಮುಂದಕ್ಕೆ ಹಾಕಲು ಒಂದು ಆರ್ಡಿನೆನ್ಸ್ ತಂದಿರಿ. ಕಾರಣ ಆಗ ಬರಗಾಲ ಇತ್ತು ಎಂದು ಹೇಳಿದಿರಿ. ಸಾಮಾನ್ಯವಾಗಿ, ಯಾವುದೇ ಆರ್ಡಿನೆನ್ಸ್, ಆರು ತಿಂಗಳೊಳಗಾಗಿ ವಿಧೇಯಕವಾಗಿ ಬರಬೇಕು. ಈ ವರ್ಷದ ಫೆಬ್ರವರಿ ತಿಂಗಳಿಂದ ಮಾರ್ಚ್ 31ನೇ ತಾರೀಖಿನವರೆಗೆ ಅಧಿವೇಶನ ನಡೆಯಿತು. ಆಗ ಇದು ಏಕೆ ಬರಲಿಲ್ಲ?

ಶ್ರೀ ಎಂ.ವೈ. ಘೋರ್ಪಡೆ : ನನಗೆ ತಿಳಿದ ಮಟ್ಟಿಗೆ, ಯಾವಾಗ ಇದನ್ನು ತರಲು ಸಾಧ್ಯವಾಯಿತು, ಆಗ ಇದನ್ನು ತಂದಿದ್ದೇವೆ. ಮೊದಲು ಇದನ್ನು ತರಬಾರದು ಎನ್ನುವ ಉದ್ದೇಶ ನಮಗೆ ಇರಲಿಲ್ಲ.

ಶ್ರೀ ಡಿ. ವಿ. ಸದಾನಂದಗೌಡ : ಆ ಆರ್ಡಿನೆನ್ಸ್ ತಂದ ಮೇಲೆ, ಈ ಮಧ್ಯದಲ್ಲಿ ಯಾವುದೇ ಅಧಿವೇಶನವಿರಲಿಲ್ಲ ಎಂದು ಇದ್ದಾಗ ನೀವು ಹೇಳಿದುದ್ದನ್ನು ನಾನು ಒಪ್ಪಿಕೊಳ್ಳಬೇಕು. ಫೆಬ್ರವರಿಯಿಂದ ಮಾರ್ಚ್‌ವರೆಗೆ ಅಧಿವೇಶನವಿತ್ತಲ್ಲಾ , ಆಗ ಏಕೆ ಇದನ್ನು ತರಲಿಲ್ಲ, ಇದಕ್ಕೆ ಕಾರಣವೇನು?

ಶ್ರೀ ಕೆ. ಜಯಪ್ರಕಾಶ ಹೆಗ್ಡೆ : ಆರು ತಿಂಗಳೊಳಗೆ ಅಥವಾ ಅಧಿವೇಶನ ನಡೆದಾಗ ಅವರು ಅದನ್ನು ಇಂಟ್ರೋಡ್ಯೂಸ್ ಮಾಡಲೇಬೇಕು.

ಶ್ರೀ ಎಂ.ವೈ. ಘೋರ್ಪಡೆ : ಅಧ್ಯಕ್ಷರೇ, ನಾನು ತಮ್ಮನ್ನು ಕೇಳುತ್ತಿದ್ದೇನೆ. ಆರ್ಡಿನೆನ್ಸ್ ರೀಪ್ಲೇಸ್ ಮಾಡುವ ವಿಚಾರ ಎಲ್ಲರಿಗೂ ಗೊತ್ತಿರತಕ್ಕಂಥಾದ್ದು. ಅದಕ್ಕೆ ಈ ಸಭೆಯಲ್ಲಿ ಯಾವಾಗ ಅವಕಾಶ ಉಂಟಾಗುತ್ತದೆ, ಆಗ ಅದು ಈ ಸಭೆಯ ಮುಂದೆ ಬರಬೇಕು. ನಮ್ಮ ಬಿಸಿನೆಸ್‌ನಲ್ಲಿ ಇದು ಇವತ್ತು ಬಂದಿದೆ. ಆರ್ಡಿನೆನ್ಸ್ ರೀಪ್ಲೇಸ್ ಮಾಡಬೇಕು ಎಂದು ಪ್ರಾರಂಭದಿಂದಲೂ ಹೇಳುತ್ತಲೇ ಬಂದಿದ್ದೇವೆ.

ಅಧ್ಯಕ್ಷರು : ಆರ್ಡಿನೆನ್ಸ್ ರೀಪ್ಲೇಸ್ ಮಾಡಲು ಆಗದಿದ್ದಲ್ಲಿ, ಪುನಃ ಇನ್ನೊಂದು ಸಲ ರೀ–ಆರ್ಡಿನೆನ್ಸ್ ಹೊರಡಿಸಿ ನಂತರ ರೀಪ್ಲೇಸ್ ಮಾಡಿ.

ಶ್ರೀ ಎಂ.ವೈ. ಘೋರ್ಪಡೆ : ಕಳೆದ ಅಧಿವೇಶನದಲ್ಲಿ ಕೂಡ ಇದು ಬಂದಿತ್ತು. ಆದರೆ ಇದು ಪಾಸ್ ಆಗಲಿಲ್ಲ.

ಶ್ರೀ ಆರಗ ಜ್ಞಾನೇಂದ್ರ : ಕಳೆದ ಅಧಿವೇಶನದಲ್ಲಿ ಇದು ಬಂದಿರಲಿಲ್ಲ.

ಶ್ರೀ ಎಂ.ವೈ. ಘೋರ್ಪಡೆ : ಬಂದಿದೆ.

Sri D.V. Sadanandha Gowda: According to our Knowledge it has not come.

ಶ್ರೀ ಯು.ಆರ್. ಸಭಾಪತಿ : ಸಭಾಧ್ಯಕ್ಷರೇ, ಇದು ಕಳೆದ ಅಧಿವೇಶನದಲ್ಲಿ ಬಂದಿತ್ತು. ಆದರೆ ಅವರಿಗೆ ಅವಕಾಶ ಸಿಗಲಿಲ್ಲ. ಕಳೆದ ಅಧಿವೇಶನದಲ್ಲಿ ಇವರು ಯಾವುದೇ ಬಿಲ್ ಪಾಸ್ ಆಗಲು ಬಿಟ್ಟಿರಲಿಲ್ಲ.

ಶ್ರೀ ಪಿ.ಟಿ. ಪರಮೇಶ್ವರ ನಾಯ್ಕ : ಇವರು ಸಭಾತ್ಯಾಗಮಾಡಿದ್ದರು. ಆ ಟೈಮಿನಲ್ಲಿ ಇದು ಬಂದಿತ್ತು.

ಶ್ರೀ ಡಿ.ವಿ. ಸದಾನಂದಗೌಡ: ಯಾವುದೇ ಆರ್ಡಿನೆನ್ಸ್ ಆರು ತಿಂಗಳೊಳಗೆ ಬಿಲ್ ಆಗಿ ಪರಿವರ್ತನೆಯಾಗಬೇಕು. ಅಲ್ಲವೇ? ಈಗ ಇದಕ್ಕೆ ಆರು ತಿಂಗಳು ಕಳೆಯಿತಲ್ಲವೇ? ಈಗ ನೀವು ಹೇಳಿ, ಇದನ್ನು ಪಾಸ್ ಮಾಡಲು ಆಗುತ್ತದೆಯೇ?

ಶ್ರೀ ಪಿ.ಟಿ. ಪರಮೇಶ್ವರ ನಾಯ್ಕ : ನೀವು ಪದೇಪದೇ ಸಭಾತ್ಯಾಗ ಮಾಡುತ್ತೀರಲ್ಲಾ, ಆದ್ದರಿಂದ, ನಿಮಗೆ ಯಾವುದು ಯಾವಾಗ ಬರುತ್ತದೆ, ಯಾವಾಗ ಹೋಯಿತು ಎಂಬುದು ಗೊತ್ತಾಗುವುದಿಲ್ಲ.

ಶ್ರೀ ಡಿ.ವಿ. ಸದಾನಂದಗೌಡ : ಅಧ್ಯಕ್ಷರೇ, ಇದೊಂದು ಟೆಕ್ನಿಕಲ್ ಪ್ರಾಬ್ಲಂ. ಇದನ್ನು ಅವರು ಆಲೋಚನೆ ಮಾಡಬೇಕು. ಈ ಆರ್ಡಿನೆನ್ಸ್ ಮಾಡಿ ಈಗಾಗಲೇ ಆರು ತಿಂಗಳು ಕಳೆದಿದೆ. ಯಾವುದೇ ಆರ್ಡಿನೆನ್ಸ್ ಆರು ತಿಂಗಳೊಳಗೆ ಬಿಲ್ ಆಗಿ ಪರಿವರ್ತನೆಯಾಗಬೇಕು. ಆರು ತಿಂಗಳು ಕಳೆದ ಮೇಲೆ ತಾವು ಅದನ್ನು ಹೇಗೆ ಪಾಸ್ ಮಾಡುತ್ತೀರಿ?

ಶ್ರೀ ಎಂ.ವೈ. ಘೋರ್ಪಡೆ : ಕಳೆದ ಅಧಿವೇಶನದಲ್ಲಿ ಕೂಡ ಇದು ಬಂದಿತ್ತು. ಆದರೆ ಇಲ್ಲಿ ಚರ್ಚೆಯಾಗಿರಲಿಕ್ಕಿಲ್ಲ ಅಷ್ಟೇ.

Sri S. Suresh Kumar: The Law is very clear. Ordinance should be replaced by a Legislation. That means, Bill into Act. ಕೇವಲ ಇಂಟ್ರೊಡ್ಯೂಸ್ ಮಾಡಿದರೆ ಆರ್ಡಿನೆನ್ಸ್‌ಗೆ ಹೊಸ ಜೀವ ಬರುವುದಿಲ್ಲ. ಈಗಾಗಲೇ ಸುಮಾರು ಒಂದು ವರ್ಷವಾಗಿರುವುದರಿಂದ, ಅದು ಲ್ಯಾಪ್ಸ್ ಆಗಿರುವುದರಿಂದ, ಹೊಸ ಬಿಲ್ ಬರಬೇಕೇ ಹೊರತು, ಈಗಿರುವ ಆರ್ಡಿನೆನ್ಸ್‌ನ್ನು ಕನ್‌ವರ್ಟ್ ಮಾಡಲು ಆಗುವುದಿಲ್ಲ.

ಶ್ರೀ ಕೆ. ಜಯಪ್ರಕಾಶ ಹೆಗ್ಡೆ: ಮಧ್ಯದಲ್ಲಿ ವ್ಯಾಕ್ಯೂಂ ಕ್ರಿಯೇಟ್ ಆಯಿತು. ಅದನ್ನು ರೀಪ್ಲೇಸ್ ಮಾಡಲು ಬರುವುದಿಲ್ಲ.

ಶ್ರೀ ಎಂ. ವೈ. ಘೋರ್ಪಡೆ: ಇದು ಆರು ತಿಂಗಳೊಳಗೆ ಬರಬೇಕಾಗಿತ್ತು. ಇದನ್ನು ಕಳೆದ ಅಧಿವೇಶನದಲ್ಲಿ ತರಲು ನಾವು ಎಲ್ಲಾ ಪ್ರಯತ್ನ ಮಾಡಿದ್ದೇವೆ. ಈಗ ಇದು ಕೇವಲ ಫಾರ್ಮಾಲಿಟಿಯಾಗಿದೆ. ಇದರಿಂದ ಹೊಸದೇನೂ ಆಗಬೇಕಾದುದಿಲ್ಲ. ಈಗಾಗಲೇ ಚುನಾವಣೆಗಳು ಆಗಿಹೋಗಿವೆ. ಆದರೆ ಆರ್ಡಿನೆನ್ಸ್ ರೀಪ್ಲೇಸ್ ಮಾಡುವ ಕ್ರಮ ಕಾನೂನು ಪ್ರಕಾರ ಆಗಬೇಕಾಗಿದೆ. ಅಷ್ಟಕ್ಕೇ ಇದನ್ನು ತಂದಿದ್ದೇವೆ. ಇದರಲ್ಲಿ ಹೊಸ ವಿಚಾರವೇನೂ ಇಲ್ಲ.

ಶ್ರೀ ಡಿ.ವಿ. ಸದಾನಂದಗೌಡ: ಒಟ್ಟಿನಲ್ಲಿ ಪಾಸ್ ಮಾಡಬೇಕಾಗಿತ್ತು. ನೀವು ಆಗಲೇ ಪಾಸ್ ಮಾಡಿಸಿಕೊಳ್ಳಬೇಕಾಗಿತ್ತು. ಈಗ ೬ ತಿಂಗಳು ಕಳೆದ ಮೇಲೆ this has no legal background. ಇದಕ್ಕೆ ಇವತ್ತು ಲೀಗಲ್ ಸ್ಯಾಂಕ್ಷಿಟಿ ಇಲ್ಲ. ಈ ಬಿಲ್‌ಗೆ ಇವತ್ತು ಲೀಗಲ್ ಸ್ಯಾಂಕ್ಷಿಟಿ ಎಲ್ಲಿದೆ ಹೇಳಿ?

ಅಧ್ಯಕ್ಷರು: ಶ್ರೀ ಘೋರ್ಪಡೆಯವರೆ, ಒಂದು ಕೆಲಸ ಮಾಡೋಣ. There are some legal implications.

ಶ್ರೀ ಎಂ.ವೈ. ಘೋರ್ಪಡೆ : ತಾವು ಬಿಸಿನೆಸ್‌ನಲ್ಲಿ ಸೇರಿಸಿದಾಗ ನಾವು ಚರ್ಚೆ ಮಾಡಲಿಕ್ಕೆ ಸಾಧ್ಯವಾಗುತ್ತದೆ.....

ಅಧ್ಯಕ್ಷರು : ಅದು ಬೇರೆ ವಿಷಯ. ನೀವು ಕೊಟ್ಟಿರಬಹುದು, ನಾವು ಸೇರಿಸಿರಬಹುದು.

Mr. Speaker:- No. After verifying from our records as also some other records we will take up tomorrow or day after tomorrow. ಇನ್ನೂ ನಮಗೆ ಐದು ದಿವಸ ಟೈಮ್ ಇದೆ. We will take it up tomorrow or day after tomorrow.

Sri B. Somashekhar:- The Bill must have been placed in the last Session. That does not mean that the Bill is passed.

ಅಧ್ಯಕ್ಷರು : ಅವೆಲ್ಲವನ್ನೂ ವೆರಿಫೈ ಮಾಡೋಣ. ವೆರಿಫೈ ಮಾಡಿ ಟೆಕ್ನಿಕಲ್ ಡಿಫಿಕಲ್ಟೀಸ್ ಎನಿದೆ, ಇಂಟ್ರಡ್ಯೂಸ್ ಮಾಡಿದ್ರಾ ಇಲ್ಲವೋ ಎನ್ನುವುದನ್ನೆಲ್ಲಾ ವೆರಿಫೈ ಮಾಡಿ.....

ಶ್ರೀ ಎಂ.ವೈ. ಘೋರ್ಪಡೆ: ಲಾಸ್ ಆಗಿದೆ ಎಂದು ತಾವು ಹೇಳುವುದಾದರೆ ನನ್ನದೇನೂ ಇಲ್ಲ. ಲಾಸ್ ಆಗಿರುವುದಕ್ಕೆ...

ಅಧ್ಯಕ್ಷರು: ತೆಗೆದುಕೊಳ್ಳೋಣ ಬಿಡಿ. ಇನ್ನೂ 4 ದಿವಸ ಇದೆ. No. We will take up this Bill afterwards. Not now. ಈ ವಿಚಾರ ಇಲ್ಲಿಗೆ ಮುಗಿಯಿತು ಬಿಡಿ.

ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

(iii) ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕ, 2003, ಪರ್ಯಾಲೋಚನಾ ಪ್ರಸ್ತಾವ

ಡಾ॥ ಜಿ. ಪರಮೇಶ್ವರ್(ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, "2003ರ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು.

ಡಾ॥ ಜಿ. ಪರಮೇಶ್ವರ್ : ಮಾನ್ಯ ಅಧ್ಯಕ್ಷರೆ, 2003-04ರ ಆಯವ್ಯಯದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರು ರಾಜ್ಯದಲ್ಲಿ ಒಂದು ಮಹಿಳಾ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಬೇಕು, ಅದರಲ್ಲೂ ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿರುವ ಬಿಜಾಪುರದಲ್ಲಿ ಪ್ರಾರಂಭ ಮಾಡಬೇಕೆಂದು ಅದನ್ನು ಅನೌನ್ಸ್ ಮಾಡಿದ್ದರು. ಅದಾದ ಮೇಲೆ ಕರ್ನಾಟಕ ರಾಜ್ಯದಲ್ಲಿರತಕ್ಕಂಥ ವಿಶ್ವವಿದ್ಯಾನಿಲಯದ ಮಸೂದೆ ಏನಿದೆ ಅದರಲ್ಲಿ ಮಹಿಳಾ ವಿಶ್ವವಿದ್ಯಾನಿಲಯವನ್ನು ಮಾಡುವುದಕ್ಕೆ ಪ್ರಾವಿಜನ್ ಇರಲಿಲ್ಲ. ಅದಕ್ಕಾಗಿ ಕೆಲವು ಪ್ರಾವಿಜನ್‌ಗಳನ್ನು ತರಲು ಇರುವಂಥ ಮಸೂದೆಯಲ್ಲಿ ಬದಲಾವಣೆ ಮಾಡುವಂಥ ಪ್ರಸಂಗ ಬಂತು. ಅದಕ್ಕಾಗಿ 21-6-2003ರಲ್ಲಿ ಒಂದು ಆರ್ಡಿನೆನ್ಸ್ ಅನ್ನು ಹೊರಡಿಸಿದ್ದೇವೆ. ಆ ಆರ್ಡಿನೆನ್ಸ್ ಅನ್ನು ಇವತ್ತು ಮಸೂದೆಯಾಗಿ ಇಲ್ಲಿ ಮಂಡಿಸಿದ್ದೇವೆ. ಅದನ್ನು ಮಂಜೂರು ಮಾಡಿಕೊಡಬೇಕೆಂದು ತಮ್ಮ ಮೂಲಕ ಸದನವನ್ನು ಕೇಳಿಕೊಳ್ಳುತ್ತೇನೆ.

†ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಈ ಮಹಿಳಾ ವಿಶ್ವವಿದ್ಯಾನಿಲಯವನ್ನು ಬಿಜಾಪುರ ನಗರದಲ್ಲಿ ಪ್ರಾರಂಭ ಮಾಡಬೇಕೆನ್ನುವಂಥ ಒಂದು ನಿರ್ಣಯವನ್ನು ಸರ್ಕಾರ ಕೈಗೊಂಡಿತ್ತು. ಅದಕ್ಕೆ ಪೂರಕವಾಗಿ ಈ ಬಿಲ್ ಅನ್ನು ಮಾನ್ಯ ಮಂತ್ರಿಗಳು ಸದನದಲ್ಲಿ ಮಂಡಿಸಿದ್ದಾರೆ. ಈ ರೀತಿಯಾದಂಥ ಮಹಿಳಾ ವಿಶ್ವವಿದ್ಯಾನಿಲಯ ದೇಶದಲ್ಲಿ ಎಷ್ಟಿವೆ ಎನ್ನುವ ಮಾಹಿತಿಯನ್ನು ಕೊಟ್ಟರೆ ಒಳ್ಳೆಯದಾಗುತ್ತದೆ, ಮತ್ತು ಈ ಮಹಿಳಾ ವಿಶ್ವವಿದ್ಯಾನಿಲಯ ವ್ಯಾಪ್ತಿಯಲ್ಲಿ ಯಾವ ಯಾವ ಶಿಕ್ಷಣ ಸಂಸ್ಥೆಗಳು ಬರುತ್ತವೆ? ನೀವು ಕೆಲವೊಂದನ್ನು ಹೇಳಿದ್ದೀರಿ.